ಕ್ರ ಸಂ	ಹುದ್ದೆ	ಭರ್ತಿ ಮಾಡುವ ಸಂಖ್ಯೆ
1	ವಾಹನ ಚಾಲಕರು	318
2	ಗ್ರೂಪ್ ಸಿ ವೃಂದದ ಅರೆವೈದ್ಯಕೀಯ ಹುದ್ದೆಗಳು	450
3	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	145
4	ಹಿರಿಯ ಪ್ರಯೋಗ ಶಾಲಾ ಟೆಕ್ನಾಲಾಜಿಸ್ಟ್	87
	ಒಟ್ಟು	1331

ಬಿ.ಎಸ್. ನಾಗರಾಜ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಸಂತೇಬಾಚನಹಳ್ಳಿ

853(1199); ಶ್ರೀ ಚೆಲುವರಾಯಸ್ವಾಮಿ. ಎನ್ (ನಾಗಮಂಗಲ)

ಅ) ಬೆಂಗಳೂರಿನ ಶ್ರೀನಗರದಿಂದ ಬೆಳಿಗ್ಗೆ 6:30ಕ್ಕೆ ಮಧ್ಯಾಹ್ನ 2:30ಕ್ಕೆ ನಾಗಮಂಗಲಕ್ಕೆ ಹೋಗುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಕೃಷ್ಣರಾಜಪೇಟೆ ತಾಲ್ಲೂಕು ಹೋಬಳಿ ಕೇಂದ್ರವಾದ ಸಂತೇಬಾಚಹಳ್ಳಿಯವರೆಗೆ ವಿಸ್ತರಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ;

ಆ) ಮೈಸೂರಿನಿಂದ ಸಂತೇಬಾಚನಹಳ್ಳಿಗೆ ಬೆಳಗ್ಗೆ 6:30 ಮತ್ತು ಸಂಜೆ 4:30ಕ್ಕೆ ಅದೇ ರೀತಿ ಇದೇ ಸಮಯಕ್ಕೆ ಸಂತೇಬಾಚನಹಳ್ಳಿಯಿಂದ ಮೈಸೂರಿಗೆ ನೇರ ಬಸ್ ಸೌಲಭ್ಯ ಕಲ್ಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ;

ಇ) ಮೈಸೂರಿನಿಂದ ತಿಪಟೂರಿಗೆ ಈ ಮೊದಲು ಸಂಚರಿಸುತ್ತಿದ್ದ ರೀತಿಯಲ್ಲಿ ಶ್ರೀರಂಗಪಟ್ಟಣ, ಪಾಂಡವಪುರ, ಚಿನಕುರಳಿ, ಶೀಳನೆರೆ, ನಾರಾಯಣಪುರ, ಸಂವಘಟ್ಟ, ಸಂತೇಬಾಚನಹಳ್ಳಿ, ಬೆಟ್ಟದಹಳ್ಳಿ, ದಡಿಘಟ್ಟ, ಜುಟ್ಟನಹಳ್ಳಿ, ಹಿರೀಸಾವೆ, ನೊಣವಿನಕೆರೆ ಮೂಲಕ ನೇರ ಬಸ್ ಸಂಚಾರ ಏರ್ಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಈ ಮಾರ್ಗವು ನಾಲ್ಕು ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸುವ ಮಾರ್ಗವಾಗಿದ್ದು, ಹಿಂದೆ ಲಾಭದಾಯಕವಾಗಿ ನಡೆಯುತ್ತಿದ್ದ ಈ ಮಾರ್ಗದಲ್ಲಿ ಬಸ್ ಓಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಲಾಗುವುದೇ;

ಈ) ತುಮಕೂರಿನಲ್ಲಿ – ಗುಬ್ಬಿ – ಮಾಯಸಂದ್ರ – ಆದಿಚುಂಚನಗಿರಿ– ಬೆಳ್ಳೂರುಕ್ರಾಸ್–ಕದಬಹಳ್ಳಿ – ಬಿಂಡಿಗನವಿಲೆ–ಸಂತೇಬಾಚನಹಳ್ಳಿ– ಕೃಷ್ಣರಾಜಪೇಟೆ – ಅಕ್ಕಿಹೆಬ್ಬಾಳ – ಬೇರ್ಯ – ಕೆ.ಆರ್.ನಗರಕ್ಕೆ ಸಂಚರಿಸುತ್ತಿದ್ದ ಬಸ್ಸನ್ನು ಪುನರಾರಂಭ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ; ಹೊಸ ಬಸ್‌ಗಳನ್ನು ಹೊಸ ಮಾರ್ಗಗಳಲ್ಲಿ ಸಂಚರಿಸುವಾಗ ಮಾರ್ಗಗಳಲ್ಲಿ ಅದರಲ್ಲೂ ಗ್ರಾಮೀಣ ಮಾರ್ಗಗಳಲ್ಲಿ ಪತ್ರಿಕೆಗಳ ಮೂಲಕ, ಕರಪತ್ರದ ಮೂಲಕ ಆಯಾ ಭಾಗದ ಜನರಿಗೆ ತಿಳಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಬೆಂಗಳೂರಿನ ಶ್ರೀನಗರದಿಂದ ಬೆಳಿಗ್ಗೆ 6:30ಕ್ಕೆ ಮಧ್ಯಾಹ್ನ 2:30ಕ್ಕೆ ನಾಗಮಂಗಲಕ್ಕೆ ಕಾರ್ಯಚರಣೆಯಾಗುತ್ತಿರುವ ಸಾರಿಗೆಯನ್ನು ಕೃಷ್ಣರಾಜಪೇಟೆ ತಾಲ್ಲೂಕು ಹೋಬಳಿ ಕೇಂದ್ರವಾದ ಸಂತೇಬಾಚನಹಳ್ಳಿಯವರೆಗೆ ವಿಸ್ತರಿಸುವುದು ನಿಗಮದ ಆರ್ಥಿಕ ಹಿತದೃಷ್ಟಿಯಿಂದ ಕಷ್ಟಸಾಧ್ಯವಾಗಿರುತ್ತದೆ.

ಆ) ಮೈಸೂರು ಸಂತೇಬಾಚನಹಳ್ಳಿ ಮಾರ್ಗವು ಭಾಗಶ: ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಸದರಿ ಮಾರ್ಗದಲ್ಲಿ ಸಾರಿಗೆಯನ್ನು ಕಾರ್ಯಚರಣೆಗೊಳಿಸಲು ಸಂಬಂಧಿಸಿದ ಸಾರಿಗೆ ಪ್ರಾಧಿಕಾರಕ್ಕೆ

ಪರವಾನಗಿಗಳು ಅರ್ಜಿ ಸಲ್ಲಿಸಿ, ಪರವಾನಗಿಗಳು ದೊರೆತ ನಂತರ ಪರಿಶೀಲಿಸಿ ಪ್ರಾಯೋಗಿಕವಾಗಿ ಮೇಲ್ಕಂಡ ಮಾರ್ಗದಲ್ಲಿ ಸಾರಿಗೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಮೈಸೂರಿನಿಂದ ಶ್ರೀರಂಗಪಟ್ಟಣ, ಪಾಂಡವಪುರ, ಚಿನಕುರಳಿ, ಶಿಳನೆರೆ, ನಾರಾಯಣಪುರ, ಸಿಂಧಘಟ್ಟ, ಸಂತೇಬಾಚಹಳ್ಳಿ, ಬೆಟ್ಟದಹಳ್ಳಿ, ದಡಿಘಟ್ಟ, ಜುಟ್ಟನಹಳ್ಳಿ, ಹಿರಿಸಾವೆ, ನೊಣವಿನಕೆರೆ ಮಾರ್ಗದ ವ್ಯಾಪ್ತಿಯಲ್ಲಿ ಹೊಸದಾಗಿ ತಿಪಟೂರು, ನಾಗಮಂಗಲ, ಕೆ.ಆರ್.ಪೇಟೆ ಹಾಗೂ ಪಾಂಡವಪುರ ಘಟಕಗಳು ಪ್ರಾರಂಭವಾಗಿದ್ದು, ಸದರಿ ಘಟಕಗಳ ವತಿಯಿಂದ ಮೇಲ್ಕಂಡ ಸ್ಥಳಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರಿಗೆಗಳನ್ನು ಕಾರ್ಯಚರಣೆ ಮಾಡುತ್ತಿರುವುದರಿಂದ ಈ ಹಿಂದೆ ತುರುವೇಕೆರೆ ಘಟಕದ ವತಿಯಿಂದ ಕಾರ್ಯಚರಣೆಯಾಗುತ್ತಿದ್ದ ಸಾರಿಗೆಯ ಆದಾಯವು ಕಡಿಮೆಯಾದ ಹಿನ್ನಲೆಯಲ್ಲಿ ಸದರಿ ಸಾರಿಗೆಯನ್ನು ರದ್ದು ಪಡಿಸಲಾಗಿರುತ್ತದೆ.

ಪ್ರಸ್ತುತ ಮೇಲ್ಕಂಡ ಎಲ್ಲಾ ಸ್ಥಳಗಳಿಗೂ ಸಂಬಂಧಿಸಿದ ಘಟಕಗಳ ವತಿಯಿಂದ ಸಂಚಾರ ಒತ್ತಡಕ್ಕನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.

ಈ) ತುಮಕೂರು ಘಟಕದ ವತಿಯಿಂದ ತುಮಕೂರು – ಗುಬ್ಬಿ – ಮಾಯಸಂದ್ರ – ಆದಿಚುಂಚನಗಿರಿ – ಬೆಳ್ಳೂರುಕ್ರಾಸ್ – ಕದಬಹಳ್ಳಿ– ಬಿಂಡಿಗನವಿಲೆ–ಸಂತೇಬಾಚನಹಳ್ಳಿ – ಕೃಷ್ಣರಾಜಪೇಟೆ – ಅಕ್ಕಿಹೆಬ್ಬಾಳ – ಬೇರ್ಯ ಮಾರ್ಗವಾಗಿ ಕೆ.ಆರ್.ನಗರಕ್ಕೆ ಈ ಹಿಂದೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಸದರಿ ಸಾರಿಗೆಯ ಪ್ರತಿ ಕಿ.ಮೀ. ಆದಾಯ ಸರಾಸರಿ ₹ 12.24 ಮಾತ್ರ ಬಂದಿದ್ದು, ಪ್ರತಿ ಕಿ.ಮೀ. ಕಾರ್ಯಚರಣೆಗೆ ₹ 7.86ರಷ್ಟು ನಷ್ಟ ಉಂಟಾಗಿದ್ದರಿಂದ ಸದರಿ ಸಾರಿಗೆಯನ್ನು ಸ್ಥಗಿತಗೊಳಿಸಲಾಗಿದೆ. ಈ ಸಾರಿಗೆಯನ್ನು

ಪುನರಾರಂಭಿಸಿ ಕಾರ್ಯಾಚರಣೆ ಮಾಡುವುದು ನಿಗಮದ ಆರ್ಥಿಕ ಹಿತದೃಷ್ಟಿಯಿಂದ ಸಮಂಜಸವಾಗಿರುವುದಿಲ್ಲ.

ಹೊಸ ಬಸ್ಸುಗಳನ್ನು ಹೊಸ ಮಾರ್ಗದಲ್ಲಿ ಸಂಚರಿಸುವಾಗ ನಿಗಮದ ವತಿಯಿಂದ ಸಂಬಂಧಿಸಿದ ಗ್ರಾಮಗಳ ಸಾರ್ವಜನಿಕ ಪ್ರಯಾಣಿಕರಿಗೆ ಮಾಹಿತಿ ತಿಳಿಯುವಂತೆ ಪತ್ರಿಕಾ ಪ್ರಕಟಣೆ, ಕರಪತ್ರಗಳ ಹಾಗೂ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರವನ್ನು ನೀಡಿ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಾರಿಗೆ ಸೌಲಭ್ಯ ಒದಗಿಸುವುದು.

854(1200); ಶ್ರೀ ಚೆಲುವರಾಯಸ್ವಾಮಿ. ಎನ್. (ನಾಗಮಂಗಲ)

ಅ) ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಓಡಿಸಲಾಗುತ್ತಿದೆಯೇ; ಮಂಡ್ಯ, ನಾಗಮಂಗಲ, ಕೃಷ್ಣರಾಜಪೇಟೆ ಡಿಪೋಗಳಿಂದ ಗ್ರಾಮೀಣ ಪ್ರದೇಶಗಳಿಗೆ ಸಂಚರಿಸುತ್ತಿರುವ ಬಸ್‌ಗಳ ವಿವರ ಒದಗಿಸುವುದು (ಮಾರ್ಗ – ಸುತ್ತುವಳಿ – ಸಮಯ ಇತ್ಯಾದಿ ವಿವರಗಳನ್ನು ಒದಗಿಸುವುದು);

ಆ) ಮಂಡ್ಯ ಮತ್ತು ಮೈಸೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಖಾಸಗಿ ಬಸ್‌ಗಳ ಓಡಾಟಕ್ಕೆ ಅನುಮತಿ ಕೋರಿ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ. ಪರ್ಮಿಟ್‌ಗಾಗಿ ಸಲ್ಲಿಸಿರುವ ಅರ್ಜಿಯ ದಿನಾಂಕ ಮಾರ್ಗದ ವಿವರ, ವಿಲೇವಾರಿಗೆ ಕೈಗೊಂಡಿರುವ ಕ್ರಮ ಇವುಗಳ ವಿವರಗಳನ್ನು ಸಲ್ಲಿಸುವುದು; ಪರ್ಮಿಟ್ ನೀಡಿಕೆಯಲ್ಲಿ ವಿಳಂಬವಾಗಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳ ಬೇಡಿಕೆಗೆ ತಕ್ಕಂತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳನ್ನು ಓಡಿಸದೇ ಖಾಸಗಿ ಬಸ್ ಸಂಚಾರಕ್ಕೂ ಅನುಮತಿ ನೀಡದೇ ಇರುವುದರಿಂದ ಜನರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;